ಓ ಎಸ್ .ನಂ.**766/2023**

**ಪಿಡಬ್ಲ್ಯು – 1**

ದಿನಾಂಕ **04-02-2026** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದ**

1. ಸಾಕ್ಷಿಯು ತನ್ನ ತಾಯಿಯ ಹೆಬ್ಬೆಟ್ಟಿನ ಗುರುತನ್ನು ಅರ್ಜಿಯ ಮೇಲೆ ಹಾಕಿದ್ದಾರೆ ಎಂದು ನೋಡಿ, ದಾಖಲೆಯನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನಿಡಿ.5 ಎಂದು ಗುರುತಿಸಲಾಯಿತು. 2015–16 ನೇ ಇಸವಿಯಲ್ಲಿ ಅಂಬೇಡ್ಕರ ವಸತಿ ಯೋಜನೆ ಅಡಿಯಲ್ಲಿ ಮನೆಯನ್ನು ಒಂದನೇ ಪ್ರತಿವಾದಿಯರು ಕಟ್ಟಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಮ್ಮ ಆಸ್ತಿ ನಂಬರ್ 67 ಅದರ ವಿಸ್ತೀರ್ಣ 35X26 ಇರುತ್ತದೆ ಎಂದರೆ ಸರಿ. ನಮ್ಮ ಆಸ್ತಿಯ ವಿಸ್ತೀರ್ಣದ ಬಗ್ಗೆ ಮಾಹಿತಿ ಇದ್ದರೂ ಸಹ ಇ–ಸ್ವತ್ತು ಮಾಡುವಾಗ ನಮ್ಮ ಆಸ್ತಿಯ ವಿಸ್ತೀರ್ಣವನ್ನು 1650 Sq.feet ಸುಳ್ಳಾಗಿ ನಮೂದು ಮಾಡಿ ರೆವೆನ್ಯೂ ಅಧಿಕಾರಿಗಳೊಂದಿಗೆ ಮೇಲಾಪಿಯಾಗಿ ಇ ಸ್ವತ್ತು ಪಡೆಯಲು ಪ್ರಯತ್ನ ಪಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಆಸ್ತಿ ಪಡೆಯಲು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ದಾವೆ ಹಾಕಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಪಿಡಬ್ಲ್ಯು – 1**

ಓ ಎಸ್ .ನಂ.**766/2023**

**ಪಿಡಬ್ಲ್ಯು – 1**